ಮಂತ್ರಿಗಳು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಉಪಯುಕ್ತ ಸಾಮಗ್ರಿಗಳು ಇರುವಂತಹ ನಿರುಪಯುಕ್ತ ಸೇತುವೆಗಳನ್ನು ಪುರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಇಂತಾದ್ದು ಎಲ್ಲಿಯೂ ಕೂಡ ಬಂದಿಲ್ಲ. ನಮ್ಮಲ್ಲಿ ಯಾವುದೇ ಒಂದು ಸೇತುವೆಯನ್ನು ಹರಾಜು ಮಾಡಿದ್ದು ಕಂಡಿಲ್ಲ. ನಮ್ಮ ಜಿಲ್ಲೆಯ ಪಂಟ್ಟಿಗಾದರೂ ಎಲ್ಲಿ ಹರಾಜು ಮಾಡಿದ್ದಾರೆ, ಯಾವಾಗ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ. – ಈ ನಿರುಪಯುಕ್ತ ಸೇತುವೆಯಲ್ಲಿರತಕ್ಕ ಕಬ್ಬಿಣದ ಸಾಮಗ್ರಿಗಳನ್ನು ಹರಾಜು ಮಾಡಿ ಆದರಿಂದ ಬಂದಂಥ ಹಣವನ್ನು ಸರ್ಕಾರಕ್ಕೆ ಜಮಾ ಮಾಡತಕ್ಕ ನಿಯಮ ಇವೊತ್ತು ನಮ್ಮ ಸರ್ಕಾರದಲ್ಲಿ ಇದೆ. ಆದರಂತೆ ಕೆಲವೊಂದು ಕಡೆ ಮಾಡಿದ್ದಾರೆ. ಮತ್ತೊಂದು ಕಡೆ ಆ ಸಾಮಾನುಗಳನ್ನು ತೆಗೆಯತಕ್ಕದ್ದಕ್ಕೆ ಆಗತಕ್ಕ ಖರ್ಚು ಬರತಕ್ಕ ಆದಾಯಕ್ಕಿಂತಲೂ ಜಾಸ್ತಿ ಯಾಗುತ್ತದೆ ಎನ್ನುವ ಒಂದು ವರದಿ ಸಹ ಇದೆ. ನಮ್ಮ ಪಿ.ಡಬ್ಲ್ಯು.ಡಿ. ನಿಯಮದ ಪ್ರಕಾರ ಅದನ್ನು ಡೆಮಾಲಿಷ್ ಮಾಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ, ಎಷ್ಟು ಹಣ ಬರದೇ ಇರುವಂಥ ಕಾರಣಕ್ಕಾಗಿ ಬಿಟ್ಟಿರುತ್ತಾರೆ. ಅದು ತಾನಾಗಿ ಕುಸಿದು ಬಿದ್ದಾಗ ಆ ಸಾಮಾನುಗಳನ್ನು ಹರಾಜು ಮಾಡತಕ್ಕ ಪ್ರವೃತ್ತಿ ಸಹ ಇದೆ ಮಾನ್ಯ ಸದಸ್ಯರು ಕೊಡತಕ್ಕ ಸಲಹೆ ಪ್ರಕಾರ ಎಲ್ಲಿ ಜಾಸ್ತಿ ರವಿನ್ಯೂ ಹರಾಜು ಮೂಲಕ ಬರುತ್ತದೆ ಎಂದು ಹೇಳಿದ್ದಾರೆ. ಆದು ಕಡಿಮೆ ವೆಚ್ಚದಲ್ಲಿ ಮಾಡಲಿಕ್ಕೆ ಆಗುತ್ತದೆಯೇ ಅದನ್ನು ನೋಡಿ ಅದನ್ನು ತೆಗೆಯತಕ್ಕ ಪ್ರಯತ್ನ ಮಾಡಬೇಕಾಗುತ್ತದೆ. ತಮ್ಮದು ಉತ್ತಮವಾದ ಸಲಹೆ ಎಂದು ನಾನು ಈಗ ಹೇಳಬಯಸುತ್ತೇನೆ. ಆದರಂತೆ ಕೆಲಸ ಕೂಡ ನಾವು ಮಾಡುತ್ತೇವೆ.

ಕಲಘಟಗಿಯಲ್ಲಿ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ಕುರಿತು

೪೭೧. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿಗೆ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಮುನ್ಸಿಫ್ ಕೋರ್ಟನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ಕಲಘಟಗಿ ತಾಲ್ಲೂಕಿನಲ್ಲಿ ಮುನ್ಸಿಫ್ ಕೋರ್ಟ್ ಪ್ರಾರಂಭಿಸುವ ವಿಚಾರವು ಇನ್ನೂ ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಆ) ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಾಗ ಇರುವ ಸಂಪನ್ಮೂಲಗಳನ್ನು ಅನುಸರಿಸಿ ಪ್ರಾರಂಭಿಸಲಾಗುವುದು.

ಶ್ರೀ ಪಿ. ಸಿ. ಸಿದ್ದನಗೌಡ.—ಕಲಘಟಗಿ ತಾಲ್ಲೂಕ್ ಮುನ್ಸಿಫ್ ಕೋರ್ಟ್ ಪ್ರಾರಂಭ ಮಾಡಲಿಕೆಂದು ನಾನು ಕೇಳುತ್ತಿರುವುದು ಇದು ಐದನೇ ವರ್ಷ ಎಂದು ಕಾಣುತ್ತದೆ. ಈಗ ತಾವು ಅದು ಫೀಸ್ಟಿಬಿಲಿಟಿ ವಿಚಾರ ಕೂಡ ಪರಿಶೀಲನೆಯಲ್ಲಿದೆ ಅಂದರೆ ಅದರಿಂದ ನಮಗೆ ಬಹಳ ದುಃಖವಾಗುತ್ತದೆ. ಆದ್ದರಿಂದ, ಮಾನ್ಯ ಸಚಿವರು ಏನಾದರೂ ಮಾಡಿ ಅದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳಬೇಕು. ಹೈಕೋರ್ಟ್ ಜಡ್ಜ್ ಕಲಘಟಗಿಗೆ ವಿಸಿಟ್ ಮಾಡಿ ಬಿಲ್ಡಿಂಗ್ಸ್ ನೋಡಿದರು. ಈಗಾಗಲೇ ಹ್ಯಾಂಡ್ ಓವರ್ ಮಾಡಿದ್ದೇವೆ. ಈಗ ಗೌರ್ನಮೆಂಟ್‌ನಿಂದ ಡಿಲೇ ಆಗುತ್ತಿದೆ. ಆದ್ದರಿಂದ, ಅದನ್ನು ಬೇಗ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಒಂದು ವೇಳೆ ಈ ವಿಚಾರದಲ್ಲಿ ಆ ಜಿಲ್ಲೆಯ ವಕೀಲರುಗಳು ಯಾರಾದರು ಅಪೋಸ್ ಮಾಡಿದ್ದಾರಾ ? ಮಾಡಿದ್ದರೆ ಅದನ್ನು ತಿಳಿಸಿ. ನೀವು ಕೊಡುವುದು ಬಿಡುವುದು ನಮಗೇ ಬಿಟ್ಟಿದ್ದು. ಆದರೆ ಯಾವುದೊಂದೂ ಡಿಸೈಡ್ ಮಾಡಿ ಕೊಡುತ್ತೇವೆಂದು ಹೇಳುವುದಾದರೆ ಯಾವಾಗ ಕೊಡುತ್ತೇವೆಂದು ಹೇಳಿ ಇಲ್ಲದಿದ್ದರೆ ಇಲ್ಲವೆಂದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಧಾರವಾಡ ಹುಬ್ಬಳ್ಳಿಯಲ್ಲಿರತಕ್ಕಂತಹ ಬಾರ್ ಅಸೋಸಿಯೇಷನ್ ಆಗಲೀ ಅಲ್ಲಿನ ವಕೀಲರುಗಳಾಗಲೀ, ಅಲ್ಲಿ ಮಾಡಬಾರದೆಂಬ ಮನವಿಯನ್ನು

ನೆವಂಗೆ ಸಲ್ಲಿಸಿಲ್ಲ ಮತ್ತು ಈ ಬಗ್ಗೆ ಆಕ್ಷೇಪಣೆಯಂನ್ನು ಯಾರೂ ಕೂಡ ಎತ್ತಲಿಲ್ಲ. ಮುನ್ಸೀಫ್ ಕೋರ್ಟ್‌ನ ಸ್ಥಾಪನೆ ಮಾಡುವುದಾದರೆ ಎಲ್ಲಿ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಎಲ್ಲಿ ಕೇಸಸ್ ಜಾಸ್ತಿ ಇದೆ ಎಂದು ಹೈಕೋರ್ಟಿನವರು ಜಿಲ್ಲಾ ನ್ಯಾಯಾಧೀಶರಿಂದ ವರದಿಯನ್ನು ತರಿಸಿ ನೋಡಂತ್ತಾರೆ. ನಂತರ ಈ ಬಗ್ಗೆ ಅವರು ವಿಚಾರ ಮಾಡಿ ಅಲ್ಲಿ ಮಾಡಬೇಕಾದುದು ಅವಶ್ಯ ಎಂದು ಕಂಡು ಬಂದರೆ ಹೈಕೋರ್ಟಿನವರು ಸರ್ಕಾರಕ್ಕೆ ಪ್ರಸ್ತಾಪವನ್ನು ಕಳಿಸುತ್ತಾರೆ. ಆಗ ನಾವು ಮಂಜೂರು ಮಾಡುತ್ತೇವೆ. ಆದರೆ ಕಲಘಟಗಿಯ ಬಗ್ಗೆ ನಮಗೆ ಇಲ್ಲಿಯವರೆಗೆ ಪ್ರಸ್ತಾವನೆಯನ್ನೇ ಅವರು ಕಳಿಸಿಲ್ಲ. ಇಲ್ಲಿಯವರೆಗೂ ಬಂದಿಲ್ಲ. ಕೋರ್ಟ್ ಅನ್ನು ಸ್ಥಾಪನೆ ಮಾಡುವುದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಬಾರದು. ನಿಜವಾಗಿ ಎಲ್ಲಿ ಲೋಡ್ ಇದೆ ಅಂತಹ ಕಡೆಗಳಲ್ಲಿ ಮುನ್ಸೀಫ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡಬೇಕಾದುದು ಯೋಗ್ಯವಾದುದು ಇದ್ದರೆ ಹೈಕೋರ್ಟಿನ ಜೊತೆಯಲ್ಲಿ ನಾನು ಇದನ್ನು ಪ್ರಸ್ತಾಪ ಮಾಡಿ ಅಲ್ಲಿ ಏನಾದರೂ ಯೋಕ್ತವಾದದ್ದು. ಅಂಥದ್ದು ಮತ್ತು ಜಿಲ್ಲಾ ನ್ಯಾಯಾಧೀಶರಿಂದ ಇದರ ಬಗ್ಗೆ ವರದಿ ಏನಾದರೂ ಕಳಿಸಿದ್ದರೆ ಆ ಬಗ್ಗೆ ಹೈಕೋರ್ಟಿನವರು ಪರಿಶೀಲನೆ ಮಾಡಿ ನಮಗೆ ವರದಿ ಕಳುಹಿಸಿಕೊಡುವಂತೆ ನಾನು ಏನಂತೆ ಮಾಡುತ್ತೇನೆ. ಆದರೆ ಅವರಿಗೆ ಆದೇಶ ಕಳಿಸಲಿಕ್ಕೆ ಆಗುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಅಲ್ಲಿ ಲೋಡ್ ಇದೆ. ಸಾಕಷ್ಟು ಕೇಸ್‌ಗಳು ಇವೆ. ಆದ್ದರಿಂದ ಅಲ್ಲಿ ಮೊಬೈಲ್ ಕೋರ್ಟ್ ಎಂದು ಮಾಡಬಹುದು.

ಅಧ್ಯಕ್ಷರು.—ಅಲ್ಲಿ ಲೋಡ್ ಇದೆಯಾ ?

ಶ್ರೀ ಪಿ. ಸಿ. ಸಿದ್ದನಗೌಡರು.— ಇದೆ.

ಅಧ್ಯಕ್ಷರು.—ಸಾಲದಿದ್ದರೆ ನೀವು ಲೋಡ್ ಮಾಡಿಸಿಕೊಡುತ್ತೀರಾ ?

ಶ್ರೀ ಪಿ. ಸಿ. ಸಿದ್ದನಗೌಡರು.—ಹೌದು.

ಅಧ್ಯಕ್ಷರು.—ಹಾಗಿದ್ದರೆ ಇದನ್ನು ತಾವು ಕನ್ಸಿಡರ್ ಮಾಡಿ. ಶ್ರೀ ವೈ. ಎಂ. ವೀರಣ್ಣನವರು ಈಗ ಪ್ರಶ್ನೆ ಕೇಳಬಹುದು.

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪುತ್ತೂರು ಬೈಪಾಸ್ ರಸ್ತೆ

೧೫೪. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಬೈಪಾಸ್ ರಸ್ತೆಯು ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಯ ಕಾರ್ಯವನ್ನು ಆದ್ಯತೆ ಮೇರೆಗೆ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಭೂಸ್ವಾಧೀನತೆಯು ಕೆಲಸವು ಪೂರ್ತಿಯಾಗಿದ್ದು, ಇದಕ್ಕೆ ಆಗತ್ಯವಾದ ೨೯-೧೫ ಎಕ್ರೆ ಖಾಸಗಿ ಸ್ಥಳವನ್ನು ಈಗಾಗಲೇ ಸರಕಾರದ ವಶಕ್ಕೆ ಪಡೆದುಕೊಳ್ಳಲಾಗಿದೆ. ಈ ಬೈಪಾಸ್ ರಸ್ತೆಯ ನಿರ್ಮಾಣದ ಕೆಲಸಕ್ಕಾಗಿ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಹಾಗೂ ಈ ರಸ್ತೆಯ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಇತರೆ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಬೈಪಾಸ್ ರಸ್ತೆ ಜನತೆಯ ಒಂದು ದೊಡ್ಡ ಕನಸಾಗಿದೆ. ಈ ಹಿಂದೆ ಹಲವಾರು ಸಲ ಇದರ ಬಗ್ಗೆ ಈ ಸದನದ ಸಭೆಯಲ್ಲಿ ಬೇರೆ ಬೇರೆ ರೂಪದಲ್ಲಿ ಚರ್ಚೆ ನಡೆದಿದ್ದರೂ ಸಹ ಯಾವುದೇ ರೀತಿಯಾದಂತಹ ಫಲಿತಾಂಶ ಕಂಡು ಬರಲಿಲ್ಲ. ಈಗ ಭೂ ಸ್ವಾಧೀನತೆಯ ಕೆಲಸ ಪೂರ್ತಿಯಾಗಿದೆ ಎಂದು ಮಾನ್ಯ ಕಾಮಗಾರಿ ಮಂತ್ರಿಗಳು ಹೇಳಿದ್ದಾರೆ ಮತ್ತು ಈ ರಸ್ತೆಯ ಕಾಮಗಾರಿಯನ್ನು ತೆಗೆದುಕೊಳ್ಳಲು ಇತರೆ ಪೂರ್ವ ಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇವರು ಲೋಕೋಪಯೋಗಿ